ಕೆಲಸ ಮಾಡುತ್ತಲೇ ಇರುತ್ತಿದ್ದ. ತನಗೆ ನೆರಳು ನೀಡಲು ಒಂದು ಬಿಚ್ಚಿದ ಕೊಡೆಯನ್ನು ಗೂಟದಂಥ ಕೋಲಿಗೆ ಕಟ್ಟಿರುತ್ತಿದ್ದ. ಅವನನ್ನು ನೋಡಿದರೆ ನನ್ನ ದೊಡ್ಡ ಸೋದರಮಾವನ ನೆನಪಾಗುತ್ತಿತ್ತು. ಅವನು ನನಗಿಂತ 7–8 ವರ್ಷ ದೊಡ್ಡವನಿದ್ದಿರಬಹುದು. ನಾನು ಕರ್ನಾಟಕ ಕಾಲೇಜಿನಲ್ಲಿ ಕಲಿಯಲಾರಂಭಿಸಿದ್ದ ದಿನಗಳು. ಒಮ್ಮೆ ತಟ್ಟನೇ ಮಳೆ ಬಂತು. ಸೈಕಲ್ ನಿಲ್ಲಿಸಿ, ಓಡಿ ಹೋಗಿ ಅವನ ಸಮೀಪವೇ, ಗೋಡೆಗೆ ಆತು ತೊಯ್ಸಿಕೊಳ್ಳುತ್ತ ನಿಂತೆ. ರಾಮಪ್ಪನಿಗೆ ಏನನ್ನಿಸಿತೋ, ಧಡಕ್ಕನೇ ಎದ್ದು, ತನ್ನ ಕೊಡೆಯನ್ನು ಬಿಚ್ಚಿ, ನನ್ನ ಕಡೆ ಧಾವಿಸಿದ. 'ಸಾಹೇಬರ, ಮಳಿ ಜೋರ ಐತಿ. ಇದನ್ನ ಹಿಡಕರ್ರಿ' ಅಂದವನೇ ನನ್ನ ಕೈಗೆ ತನ್ನ ಕೊಡೆ ಕೊಟ್ಟು, ತಾನು ತೊಯ್ಸಿಕೊಳ್ಳುತ್ತ ನಿಂತ. ಆ ಕ್ಷಣ ನನಗೆ ಏನು ಮಾಡಬೇಕೋ, ತಿಳಿಯಲಿಲ್ಲ. 'ಬ್ಯಾಡ, ನೀನ ಹಿಡಕೋ, ನೀ ಯಾಕ ತೊಯ್ಸಿಕೋತೀ?' ಅಂದೆ. 'ನೀವು ಸಾಹೇಬರರಿ. ನೀವು ತೊಯ್ಸಿಕೋಬಾರದರಿ' ಅಂದ. ಹೊರಗೆ ಸುರಿಯುತ್ತಿದ್ದ ಮಳೆ ನನ್ನ ಕಣ್ಣಲ್ಲಿ ಇಳಿಯತೊಡಗಿತು. ತಕ್ಷಣ ಅವನನ್ನು ಎಳೆದು ತಬ್ಬಿ ಹಿಡಿದುಕೊಂಡೆ. ಅವನು ನಡುಗುತ್ತಿದ್ದ; ಮಳೆಗೋ ನನ್ನ ಎಳೆತಕ್ಕೋ ತಿಳಿಯಲಿಲ್ಲ. ಮಳೆ ನಿಲ್ಲುವವರೆಗೆ ಇಬ್ಬರೂ ನಡುಗುತ್ತಿದ್ದೆವು. ಮಳೆ ನಿಂತಾಗ ಇಬ್ಬರೂ ನಗುತ್ತಿದ್ದೆವು.

ಅಂದಿನಿಂದ ಅವನನ್ನು ಕಾಣದಿದ್ದರೆ ಸಮಾಧಾನವೇ ಅನಿಸುತ್ತಿದ್ದಿಲ್ಲ. ಮುಂದೆ ನಾನು ಎಂಎ ಮುಗಿಸಿ, ಕೆಲಸಕ್ಕೆ ತೊಡಗಿದಾಗಲೂ, ಅಷ್ಟು ವರ್ಷ, ಅವನೇ ನನಗೂ ನನ್ನ ಗೆಳೆಯರಿಗೂ ಸೋದರಮಾವಂದಿರಿಗೂ ಉತ್ತಮ ಚಪ್ಪಲಿ, ಶೂ ಹೊಲಿದು ಕೊಡುತ್ತಿದ್ದ. ರೇಟಿನ ಬಗ್ಗೆ ಅವನೊಡನೆ ಎಂದೂ ಚೌಕಾಶಿ, ಜಿಕೇರಿ ಮಾಡಬೇಕು ಅನಿಸಲೇ ಇಲ್ಲ. ನಾನು, ರಾಮು ಒಂದೇ ಕುಟುಂಬದವರಂತೆ ಆಗಿದ್ದೆವು. ಹಬ್ಬ ಹುಣ್ಣಿಮೆ ಹೊತ್ತಿಗೆ ಅವ್ವ ಅವನಿಗಾಗಿಯೂ ಒಂದೆರಡು ಕಡುಬೋ ಹೋಳಿಗೀನೋ ಕಟ್ಟಿ ಕೊಡುತ್ತಿದ್ದಳು. ಕೆಲವು ವರ್ಷಗಳ ನಂತರ ಅವನ ಜೊತೆ ಕೂಡಲಾರಂಭಿಸಿದ್ದ ಅವನ ಮಗ ಬಸವಂತನೂ ನನಗೆ ಆಪ್ತನಾದ. ಒಮ್ಮೆ ರಾಮು ಬಂದಿರಲಿಲ್ಲ, ಬಸೂನನ್ನು ವಿಚಾರಿಸಿ, ಕಿಲ್ಲೆಯಲ್ಲಿ ಕೆಳಗಡೆ ಮೋಚಿಗಲ್ಲಿಯಲ್ಲಿದ್ದ ಅವನ ಮನೆ ಹುಡುಕಿಕೊಂಡು ಹೋದೆ. ರಾಮು ಜ್ವರದಿಂದ ಬಳಲುತ್ತಿದ್ದ. ಆದರೂ ಎದ್ದವನೇ, 'ಸಾಹೇಬರ, ನೀವು...' ಎನ್ನುತ್ತ ತಡಬಡಾಯಿಸಿ ಎದ್ದು ನಿಂತ. ಅವನ ಹೆಂಡತಿ, ಮಗಳು ನನ್ನನ್ನು ಮಿಕಿಮಿಕಿ ನೋಡತೊಡಗಿದರು. ಒಯ್ದಿದ್ದ ಬ್ರೆಡ್ ಪಲ್ಲಂಗದ ಮೇಲೆ ಇಟ್ಟೆ. 'ನಾ ಹೇಳತಿದ್ನೆಲ್ಲ ಆ ಸಾಹೇಬರು ಇವರು' ಅಂದ. ಶಿವಕ್ಕನಿಂದ ಚಾ ಮಾಡಿಸಿಕೊಂಡು ಕುಡಿದು ಬಂದೆ.

ಸದ್ಯ ಇನ್ನೊಂದು ನೆನಪು. 'ಪ್ರಜಾವಾಣಿ'ಯಲ್ಲಿ 'ಚಹಾದ ಜೋಡಿ ಚೂಡಾದ್ಹಾಂಗ' ಅಂಕಣ ಬರೆಯುತ್ತಿದ್ದೆ. ಸಾಮಾನ್ಯವಾಗಿ ಎರಡು ದಿನಕ್ಕೊಮ್ಮೆ ಪೇಟೆಗೆ ಹೋಗುತ್ತಿದ್ದೆ. ಅಲ್ಲಿ ಒಂದು ಮುದ್ರಣಾಲಯದ ಮುಂದೆ ಗಾಡಿ ನಿಲ್ಲಿಸಿ, ಆ ಗಜಿಬಿಜಿಯ ಸಂತೆಪೇಟೆಯಲ್ಲಿ ಹೋಗುವುದು ಸರಳವೆನಿಸುತ್ತಿತ್ತು. ಮಹೇಂದ್ರಕರ ಅವರ ಸಿಗರೇಟ್ ಅಂಗಡಿಯ ಮುಂದೆ, ಲಾಟರಿ ಟಿಕೆಟ್ ಮಾರುವವನ ಪಕ್ಕದಲ್ಲಿ ಒಬ್ಬ ಮುಸಲ್ಮಾನರ ಹೆಣ್ಣುಮಗಳು ಬಾಳೆಹಣ್ಣು ಮಾರುತ್ತಿದ್ದಳು. ಅವಳ ಮುಂದೆ ನಿಂತೆ. 'ಎಮ್ಮಾ, ಹಣ್ಣು ಹ್ಯಾಂಗ ಕೊಟ್ಟಿವಾ?' ಅಂದೆ. ಅವಳ ಪಕ್ಕದಲ್ಲಿಯೇ ಅವಳ ಮಗಳೂ ಕುಳಿತಿದ್ದಳು. ತಾಯಿ ತನ್ನ ಮಗಳಿಗೆ, 'ರಜಿಯಾ, ಯೇ ಕೋನ್ ಮಾಲುಂ ಹೈ ಕ್ಯಾ?' ಅಂದಳು. ಮಗಳು ತಕ್ಷಣ, 'ಗೊತ್ತಿಲ್ಲೇನ ಮಾ, ಇವರು, ಚಾದ ಜೋಡಿ ಚೂಡಾ ಬರೀತಾರಲ್ಲ, ಅವರು!' ಎಂದಳು. ನನ್ನತ್ತ ನೋಡುತ್ತ, 'ಆಯಿತಾರಕೊಮ್ಮೆ ನೀವು ಬರದಿದ್ದನ್ನ ತಪ್ಪದ ಓದತೇವರಿ' ಅಂದಳು. ಒಂದು ಕ್ಷಣ ದಿಗಿಲಾಗಿ ನಿಂತೆ. ಆ ದಿನಗಳಲ್ಲಿ ಪ್ರಜಾವಾಣಿಯ ನನ್ನ ಅಂಕಣ ಓದುತ್ತಿದ್ದ ಕರ್ನಾಟಕದ ಸಮಸ್ತ ಸುಶಿಕ್ಷಿತ ಕನ್ನಡ ಓದುಗರನ್ನು ಅವರಿಬ್ಬರ ಮುಂದೆ ನಿವಾಳಿಸಿ ಬಿಡಬೇಕು ಅನ್ನಿಸಿತು. ಒಂದು ಡಜನ್ ಹಣ್ಣು ತೆಗೆದುಕೊಂಡು ಕೈಚೀಲಕ್ಕೆ ಹಾಕಿಸಿಕೊಂಡೆ. 'ಎಷ್ಟ ರೊಕ್ಕಬೇ ಎಮ್ಮಾ?' ಕೇಳಿದೆ.